# ಪುಣ್ಯಕಾಲದ ಸಂ-ಕ್ರಾಂತಿ ಕನವರಿಕೆಗಳು

ಮತ್ತೊಂದು 'ಮಕರ ಸಂಕ್ರಮಣ' ಬಂದಿದೆ (ಜ.14). ಬದಲಾವಣೆಯ ಅಗತ್ಯ ಅನಿವಾರ್ಯಗಳನ್ನು ಸಂಕೇತಿಸುವ ಈ ಹಬ್ಬದ ನೆಪದಲ್ಲಿ, ನಮ್ಮೊಳಹೊರಗಿನ ಪಥಸಂಚಲನದ ದಿಕ್ಕುದೆಸೆಗಳ ಕುರಿತು ಒಂದು ಅವಲೋಕನ ಇಲ್ಲಿದೆ.

■ ಗೌರಿ



ಸುದೀರ್ಘ ಕಾಲದಿಂದ ಆಗಸದಲ್ಲಿ ಪಾರುಪತ್ಯ ನಡೆಸುತ್ತಿದ್ದ ಮೋಡಗಳೆಲ್ಲ ಮೆಲ್ಲಗೆ ಜಾಗ ಖಾಲಿ ಮಾಡತೊಡಗಿವೆ. ಮಳೆಯಲಿ ಮಿಂದು, ಚಳಿಯಲಿ ಮುದುರಿದ್ದ ಗಿಡಮರಗಳೆಲ್ಲ ಮೆಲ್ಲಗೇ ಮೈ ಸಡಿಲಗೊಳಿಸಿಕೊಂಡು ಕಣ್ಮಿಣುಕಿಸುತ್ತಿವೆ. ಇರುಳಕನ್ನಿಕೆಯ ಪಾರದರ್ಶಕ ಸೆರಗು ಗಾಳಿಗೆ ಹೊಯ್ದಾಡುವ ಹಾಗೆ ಮಂಜು, 'ತೆರೆಮರೆ' ಆಟವನ್ನು ಜೋರು ನಡೆಸಿದೆ.

ಗರಿಕೆ ಹುಲ್ಲಿನ ಮೇಲೆ, ಅರಳು ಹೂವಿನ ಮೇಲೆ, ಗೋಡೆಗೆ ಅಂಟಿಸಿದ್ದ ಜಾಹೀರಾತು ಪತ್ರಗಳ ಮೇಲೆ, ಹಸಿರು ತಾಡಪತ್ರೆಗಳಿಂದ ಕಟ್ಟಿಕೊಂಡಿರುವ ಪುಟ್ಟ ಪುಟ್ಟ ಗುಡಿಸಲುಗಳ ಮೇಲೆ, ತಡರಾತ್ರಿ ಬಂದ ಪೋರ ಮನೆಯೆದುರು ಕಳಚಿ ಬಿಸಾಕಿದ್ದ ಚಪ್ಪಲಿಗಳ ಮೇಲೆ, ನಿನ್ನೆ ಒಣಗಲು ಹಾಕಿ, ತೆಗೆಯಲು ಮರೆತ ಪುಟ್ಟಿಯ ಸ್ಕೂಲ್ ಯೂನಿಫಾರ್ಮಿನ ಮೇಲೆ, ಬಸ್‌ಸ್ಟ್ಯಾಂಡಿನಲ್ಲಿ ನಡುಗುತ್ತ ಮಲಗಿದ್ದ ಭಿಕ್ಷುಕಿಯ ಚಿಂದಿಬಟ್ಟೆಯಿಂದ ಅರೆಮುಚ್ಚಿದ್ದ ಮೈಯ ಮೇಲೆ ಎಲ್ಲೆಂದರಲ್ಲಿ ಇಬ್ಬನಿ ತನ್ನ ಮೊಹರು ಮೂಡಿಸಿದೆ. ರಾತ್ರಿಯಿಡೀ ನಡೆದ ಈ ಮಂಜಿನ ಹಾವಳಿ ಮತ್ತು ಚಳಿ ಗಾಳಿ ಕಚಗುಳಿಯ ಪ್ರಣಯದಾಟಕ್ಕೆ ಜಗವೇ ಬೆವರಿ ದಣಿದು ಮಲಗಿದಂತಿದೆ.

ಅರರೆ! ಬೆಳಗಿನ ಸಿಹಿನಿದ್ದೆಯ ಜೊಂಪು ಜಾರಿಯಲ್ಲಿರುವಾಗಲೇ ಸೂರ್ಯ ಸರಸರ ಏರಿ ಬಂದುಬಿಟ್ಟನಲ್ಲ! ತನ್ನ ಎಳೆಕಿರಣಗಳನ್ನು ಇಬ್ಬನಿ ಬಿಂದುಗಳಿಗೆ ತಾಗಿಸಿ, ಅವುಗಳನ್ನು ಬಹುವರ್ಣದ ಹೊಳೆವ ಮಣಿಯಾಗಿಸಿಬಿಟ್ಟನಲ್ಲ. ಆಹಾ! ಎಂಥ ಪವಾಡವಿದು, ಇಷ್ಟು ಹೊತ್ತು ಮುದುಡಿದ್ದ ಜಗವೆಲ್ಲ ಈಗ ತುಸು ತುಸುವೇ ಕಣ್ತೆರೆಯುತ್ತ, ರವಿಯ ಸ್ಪರ್ಶಕ್ಕೆ ರೋಮಾಂಚನಗೊಳ್ಳುತ್ತ ಮೆಲ್ಲಗೇ ಮೈಮುರಿಯುತ್ತಿರುವ ಕ್ಷಣದಲ್ಲಿ ಇರುವ ಮಾಯೆ ಅದೆಂಥದು!

ಅಂದು ನಿದ್ದೆಯಿಂದ ಎದ್ದ ಭುವಿಯ ಅರೆಜೊಂಪಿನ ಕಣ್ಣಿಗೆ ಏನೋ ಬದಲಾದಂತೆ ಭಾಸವಾಗುತ್ತದೆ. ತನ್ನೊಳಗೂ ಹೊರಗೂ ಹೊಸತೇನೋ ಸೇರಿಕೊಂಡಂತೆ ಅನಿಸುತ್ತದೆ. ಆಗಸದಲ್ಲಿ ತನ್ನ ಕಂಡು ನಸುನಗುತ್ತಿರುವ ಸೂರ್ಯ ಈವತ್ತು ಕ್ಷೌರ ಮಾಡಿಕೊಂಡು ಬಂದ ಪೋರನ ಹಾಗೆ ಬೇರೆಯದೇ ಆಗಿ ಕಾಣಿಸುತ್ತಾನೆ. ಅದೇ ನಗು; ಬೇರೆ ಮೊಗ! ಏನದು ಬದಲಾಗುವುದು?

### ಬದಲಾಗುವುದು ಸೂರ್ಯಪಥ!

ಹೌದು, ಸೂರ್ಯ ತನ್ನ ದಾರಿಯನ್ನು ಬದಲಿಸಿಕೊಳ್ಳುವ 'ಮಕರ ಸಂಕ್ರಮಣ'ದ ಉತ್ತರಾಯಣ ಪುಣ್ಯಕಾಲಕ್ಕೆ ನಾವು ಅಡಿಯಿಡುತ್ತಿದ್ದೇವೆ. ಸುದೀರ್ಘ ಹಗಲಿನ, ಸಣ್ಣ ರಾತ್ರಿಗಳ ದಿನಗಳ ಹೊಸ ದಿನಚರಿ ನಮಗಾಗಿ ಕಾದಿದೆ.

ನೆಲಬಿರಿಯುವಂತೆ ಆಕ್ರಂದಿಸಿ, ಬಾನಿಗೆ ಗುರಿಹಿಡಿದ ಸಿಡಿಮದ್ದುಗಳನ್ನು ಸಿಡಿಸಿ ಅಂತೂ ಇಂತೂ ಹೊಸ ವರ್ಷವನ್ನು ಕೆಡವಿಕೊಂಡಾಗಿದೆ.

